K GOPALAKRISHNA

Digitally signed by K GOPALAKRISHNA
Date: 2025.03.04 17:17:04 +0530



**<u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ಸೋಮವಾರಪೇಟೆ.</u>**

**<u>ಸಿ.ಸಿ.ನಂ. 452/2024</u>**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಸೋಮವಾರಪೇಟೆ ಅಬಕಾರಿ ನಿರೀಕ್ಷಕರು,

ವಿರುದ್ಧ

ಆರೋಪಿ : ಕುಶಾಲ ಅಲಿಯಾಸ್ ಸುದೀಪ್ ತಂದೆಃ ಪರಮೇಶ್
ಕಿರುಬಿಲ್ಲಹ ಗ್ರಾಮ, ಕೊಡ್ಲಿಪೇಟೆ ಹೋಬಳಿ,
ಸೋಮವಾರಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

**<u>ದೋಷಾರೋಪಣೆ</u>**

**ನಾನು ಶ್ರೀ ಕೆ. ಗೋಪಾಲ ಕೃಷ್ಣ, ಬಿ.ಎ.ಎಲ್., ಎಲ್.ಎಲ್.ಬಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ಸೋಮವಾರಪೇಟೆ ಈ ಮೂಲಕ ಆರೋಪಿಯ ಮೇಲೆ ಮಾಡಿದ ದೋಷಾರೋಪಣೆ ಏನೆಂದರೆ.**

ದಿನಾಂಕ 06.04.2024 ರಂದು ಲೋಕಸಭಾ ಚುನಾವಣೆಯ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿದ್ದ ಸಮಯದಲ್ಲಿ ಅಬಕಾರಿ ಅಕ್ರಮ ತಡೆಗೆ ಸಿಬ್ಬಂದಿಗಳೊಂದಿಗೆ ಅಬಕಾರಿ ಗಸ್ತು ಮಾಡುತ್ತಿದ್ದಾಗ ಬಂದ ಖಚಿತ ಮಾಹಿತಿ ಮೇರೆಗೆ ಅಬಕಾರಿ ಅಧಿಕಾರಿಯವರು ಸಿಬಂದಿಯವರೊಂದಿಗೆ ಕಿರುಬಿಳಹ ಗ್ರಾಮ ಸೋಮವಾರಪೇಟೆ ತಾಲ್ಲೂಕು ಆದ ಆರೋಪಿಯಾದ ನಿನ್ನ ವಾಸದ ಮನೆಗೆ ತೆರಳಿದಾಗ ಒಂದು ಕೆಂಪುಬಣ್ಣದ ಹಿರೋ ಹೊಂಡಾ ಕಂಪನಿ ತಯಾರಿತ ದ್ವಿ-ಚಕ್ರ ವಾಹನ ಕೆಎ-09-ಕೆ-5443 ರ ವಾಹನದ ಬಲಭಾಗದಲ್ಲಿರುವ ಹುಕ್ಕಿಗೆ ಹಾಗೂ ಹಿಂಬದಿಯ ಕ್ಯಾರಿಯವರಿಗೆ ಮಾಸಿದ ಹಳದಿ ಬಣ್ಣದ ಪ್ಲಾಸ್ಟಿಕ್ ಹಗ್ಗ ಕಟ್ಟಿದ್ದು, ಸದರಿ ಹಗ್ಗಕ್ಕೆ ಸುಮಾರು 10 ಕೆಜಿ ಸಾಮರ್ಥ್ಯದ ಕಪ್ಪು ಬಣ್ಣದ ಒಂದು ಪ್ಲಾಸ್ಟಿಕ್ ಕೈ ಚೀಲದಲ್ಲಿ ಸುಮಾರು 2 ಲೀ ಗಾತ್ರದ 2 ಹಸಿರು ಬಣ್ಣದ ಪ್ಲಾಸ್ಟಿಕ್ ಬಾಟಲಿಗಳಲ್ಲಿ ತಲಾ 2 ಲೀ ನಂತೆ ಒಟ್ಟು 4 ಲೀಟರ್ ಘಾಟುವಾಸನೆಯುಳ್ಳ ಕಳ್ಳಬಟ್ಟಿ ಸಾರಾಯಿ ಇದ್ದು, ನಂತರ ಮನೆಯ ಪಕ್ಕ ತೆರಳಿ ಪರಿಶೀಲಿಸಿದಾಗ ಮನೆಯ ಮುಂಬಾಗಿಲಿಗೆ ಬೀಗ ಹಾಕಲಾಗಿದ್ದು ಮನೆಯ ಸುತ್ತ-ಮುತ್ತ ಶೋಧನೆ ಮಾಡಿದಾಗ ಮನೆಯ ಹಿಂಭಾಗದ ಕಾಫಿ ತೋಟದ ಗಿಡಗಳ ಮಧ್ಯೆ 20 ಲೀ ಸಾಮರ್ಥದ 1 ಹಳದಿ ಬಣ್ಣದ ಹಾಗೂ 2 ಹಸಿರುವ ಬಣ್ಣದ ಪ್ಲಾಸ್ಟಿಕ್ ಬಿಂದಿಗೆಗಳಲ್ಲಿ ತಲಾ 20 ಲೀಟರ್ ನಂತೆ ಒಟ್ಟು 60 ಲೀ ಬೆಲ್ಲದ ಕೊಳೆ ಇರುವುದು ಕಂಡುಬಂದಿದ್ದು, ಆ ಮೂಲಕ

ಸಿ.ಸಿ.ನಂ. 452/2024

ಆರೋಪಿಯಾದ ನೀನು ಕರ್ನಾಟಕ ಅಬಕಾರಿ ಕಾಯಿದೆಯ ಕಲಂ 11, 13, 15 ಉಲ್ಲಂಘನೆಯಾಗಿದ್ದು ಕಲಂ 32(1), 38(ಎ),43 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ ಮತ್ತು ಸದರಿ ಆರೋಪಣೆಯ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರ-1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ-2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತೀರೋ?

ಉತ್ತರಃ

[ಈ ದೋಷಾರೋಪಣೆಯನ್ನು ಈ ದಿನ ದಿನಾಂಕ 17.12.2024 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

ಸಹಿ/-

(ಕೆ.ಗೋಪಾಲಕೃಷ್ಣ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಸೋಮವಾರಪೇಟೆ.